ದಿನಾಂಕಃ 27.10.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀಮತಿ ಕೆ.ವಿ. ವಕೀಲರಿಂದಃ**

ಪ್ರಸ್ತುತ ಪ್ರಕರಣವನ್ನು ಆರೋಪಿಯೊಟ್ಟಿಗೆ ಆಗಿರುವ ವ್ಯವಹಾರದ ಬಾಬ್ತು ಹೂಡಲಾಗಿರುತ್ತದೆ. ನಮ್ಮ ಪಿರ್ಯಾದಿಯಲ್ಲಿ ಯಾವ ವರ್ಷ ಆರೋಪಿಗೆ ಬೆಳೆ ಕೊಟ್ಟಿರುತ್ತೇನೆ ಎಂದು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಎಷ್ಟು ಎಷ್ಟು ಬೆಳೆಯನ್ನು ಮಾರಾಟ ಮಾಡಿರುತ್ತೇನೆ ಎಂದು ನೆನಪಿಲ್ಲ. ಆರೋಪಿಯು ಎಸ್.ಬಿ.ಐ. ಬ್ಯಾಂಕ್ ಗೆ ಸಂಬಂಧಿಸಿದ ಚೆಕ್ ನ್ನು ನೀಡಿರುತ್ತಾರೆ. ನಾನು ಸದರಿ ಚೆಕ್ ನ್ನು ಅದೇ ಬ್ಯಾಂಕ್ ಗೆ ನಗದೀಕರಣಕ್ಕಾಗಿ ಹಾಜರುಪಡಿಸಿರುತ್ತೇನೆ, ಸದರಿ ದಿನಾಂಕ ನೆನಪಾಗುತ್ತಿಲ್ಲ. ಸದರಿ ಹಿಂಬರಹವನ್ನು ಸಾಕಷ್ಟು ಹಣ ಇಲ್ಲ ಎಂದು ನೀಡಿರುತ್ತಾರೆ. ಸದರಿ ಚೆಕ್ ನ ಸಂಖ್ಯೆ ನೆನಪಾಗುತ್ತಿಲ್ಲ. ಚೆಕ್ ನ ದಿನಾಂಕವು 15.12.2022 ಆಗಿರುತ್ತದೆ. ಸದರಿ ಚೆಕ್ ನ್ನು ಎಷ್ಟು ದಿನದ ನಂತರ ನಗದೀಕರಣಕ್ಕಾಗಿ ಹಾಜರುಪಡಿಸಿರುತ್ತೇನೆ ಎಂದು ನೆನಪಾಗುತ್ತಿಲ್ಲ. ಆರೋಪಿಯ ವಿರುದ್ಧ ಇತರ ಪ್ರಕರಣವನ್ನು ದಾಖಲಿಸಿರುವ ಭೋಜೇಗೌಡ, ವೆಂಕಟೇಶ್ ಗೌಡ ಮತ್ತು ಲಕ್ಷಣ ಗೌಡ ನನ್ನ ಸಹೋದರರು ಎಂದರೆ ಸರಿ. ನನ್ನ ಚೆಕ್ ನ್ನು ಹೊರತುಪಡಿಸಿ ಅವರ ಚೆಕ್ ನ ಬಾಬ್ತು ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಈ ಪ್ರಕರಣವನ್ನು ದಾಖಲಿಸುವ ಪೂರ್ವದಲ್ಲಿ ಆರೋಪಿಯ ವಿರುದ್ಧ ಬೇರೊಂದು ಪ್ರಕರಣವನ್ನು ದಾಖಲಿಸಿದ್ದ ಬಗ್ಗೆ ನೆನಪಾಗುತ್ತಿಲ್ಲ.

ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುವ ಚೆಕ್ ನ್ನು ಇದೇ ನ್ಯಾಯಾಲಯದ ಮುಂದೆ ಆರೋಪಿಯಿಂದ ಪಡೆದುಕೊಂಡಿರುತ್ತೇನೆ. ಸದರಿ ದಿನಾಂಕ ನೆನಪಾಗುತ್ತಿಲ್ಲ. ಸದರಿ ಚೆಕ್ ನ್ನು ಬೆಳೆಯ ಮೊತ್ತದ ಬಾಬ್ತು ನ್ಯಾಯಾಲಯದ ಮುಂದೆ ಪಡೆದುಕೊಂಡಿರುತ್ತೇನೆ. ಒಂದು ವೇಳೆ ಸದರಿ ಚೆಕ್ ನ್ನು ಬೆಳೆಯ ಬಾಬ್ತು ಪಡೆದುಕೊಂಡಿದ್ದಲ್ಲಿ ನಾನು ಆರೋಪಿಗೆ ಎಷ್ಟು ಬೆಳೆಯನ್ನು ಮಾರಾಟ ಮಾಡಿದ್ದೆ ಎಂದು ನನ್ನ ಪಿರ್ಯಾದಿನಲ್ಲಿ ತಿಳಿಸುತ್ತಿದ್ದೆ ಎಂದರೆ ಸರಿ. ನಾನು ಸದರಿ ಬೆಳೆಯನ್ನು ಬೆಳೆಯುತ್ತಿದ್ದ ಬಾಬ್ತು ದಾಖಲಾತಿಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ತೊಂದರೆಯಾಗುತ್ತದೆ ಎಂಬ ಕಾರಣದಿಂದ ದಾಖಲಾತಿಯನ್ನು ಹಾಜರುಪಡಿಸದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-5 ರಲ್ಲಿ ಇರುವ ಸಹಿ ಯಾರಿಗೆ ಸೇರಿದ್ದಾಗಿರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ನಿಪಿ-1 ರಲ್ಲಿ ತಿದ್ದುಪಡಿಯಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ತಿದ್ದುಪಡಿ ಮಾಡಲಾಗಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯನ್ನು ಒತ್ತಡ ನೀಡಿ ನ್ಯಾಯಾಲಯದಿಂದ ಚೆಕ್ ನ್ನು ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಕಾಣುವ ಸಹಿ ನನ್ನದಾಗಿರುವುದಿಲ್ಲ. ಅದು ಯಾರ ಸಹಿ ಎಂದು ನನಗೆ ತಿಳಿದಿರುವುದಿಲ್ಲ.

ನಿಪಿ-2 ಯಾರಿಂದ ಪಡೆಯಲಾಗಿರುತ್ತದೆ ಮತ್ತು ಸದರಿ ದಿನಾಂಕವು ನೆನಪಾಗುತ್ತಿಲ್ಲ. ನಿಪಿ-3 ನ್ನು ಯಾರು ಯಾರಿಗೆ ನೀಡಿರುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ. ನಿಪಿ-4 ಮತ್ತು 5 ಯಾರಿಗೆ ಸಂಬಂಧಿಸಿದ್ದಾಗಿರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ನಿಪಿ-6 ನ್ನು ಯಾರಿಂದ ಪಡೆದುಕೊಂಡಿರುತ್ತೇನೆ ಎಂದು ಹೇಳಲು ಸಾಧ್ಯವಿಲ್ಲ. ನಿಪಿ-1 ನ್ನು ಆರೋಪಿಯ ಸಹಿಯನ್ನು ನಾನೇ

ಮಾಡಿ ಬಲಾತ್ಕಾರದಿಂದ ಆರೋಪಿಯಿಂದ ಪಡೆದುಕೊಳ್ಳಲಾಗಿರುತ್ತದೆ ಎಂದರೆ ಸರಿಯಲ್ಲ. ಪ್ರಸ್ತುತ ಪ್ರಕರಣದ ಪೂರ್ವದಲ್ಲಿಯೂ ಆರೋಪಿಯ ವಿರುದ್ಧ ಪ್ರಕರಣ ದಾಖಲು ಮಾಡಿರುವ ಬಗ್ಗೆ ನೆನಪಾಗುತ್ತಿಲ್ಲ. ಸದರಿ ಪ್ರಕರಣವೂ ರಾಜಿ ಸಂದಾನವಾಗಿರುತ್ತದೆ ಮತ್ತು ಅದರ ದಿನಾಂಕ ನೆನಪಾಗುತ್ತಿಲ್ಲ. ನಿಪಿ-1 ರಲ್ಲಿರುವ ಸಹಿಯೂ ಆರೋಪಿಯದ್ದಾಗಿರುವುದಿಲ್ಲ ಎಂದರೆ ಸರಿಯಲ್ಲ ಮತ್ತು ನಿಪಿ-2 ರಲ್ಲಿ ಸದರಿ ಸಹಿಯು ವ್ಯತ್ಯಾಸವಿರುತ್ತದೆ ಎಂದು ನಮೂದು ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯು ನಮ್ಮ ಬಳಿ ಕಾಫೀ ಮತ್ತು ಅಡಿಕೆ ಬೆಳೆಯನ್ನು ಖರೀದಿ ಮಾಡುತ್ತಿದ್ದ ಬಾಬ್ತು ಯಾವುದೇ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ಆರೋಪಿಯು ಎಂದಿಗೂ ನಮ್ಮ ಬಳಿ ಬೆಳೆಯನ್ನು ಖರೀದಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಪ್ರಸ್ತುತವಾಗಿ ವಾಸಿಸಲು ಯಾವುದೇ ಸ್ವಂತ ಮನೆ ಇಲ್ಲದಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

ಆರೋಪಿಗೆ ಕಾಫೀ ಮತ್ತು ಅಡಿಕೆಯ ವ್ಯವಹಾರ ಮಾಡಲು ಆರ್ಥಿಕವಾಗಿ ಶಕ್ತರಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಸಹೋದರರು ಸೇರಿ ಆರೋಪಿಯಿಂದ ಅಕ್ರಮವಾಗಿ ಚೆಕ್ ನ್ನು ಪಡೆದು ಅವರ ಸಹಿಯನ್ನು ನಾವೇ ಮಾಡಿ, ಒಂದೇ ದಿನಾಂಕದ 4 ದಾಖಲಾತಿಯನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ಒಂದು ವೇಳೆ ನಾವು ಆರೋಪಿಯೊಟ್ಟಿಗೆ ಯಾವುದೇ ವ್ಯವಹಾರ ಮಾಡಿದ್ದಲ್ಲಿ ಅದರ ಬಾಬ್ತು ದಾಖಲಾತಿಯನ್ನು ಹಾಜರುಪಡಿಸುತ್ತಿದ್ದೆವು ಎಂದರೆ ಸಾಕ್ಷಿಯು ಚೆಕ್ ನ್ನು ಹಾಜರುಪಡಿಸಿರುತ್ತೇವೆ, ವ್ಯವಹಾರ ಮಾಡಿದ ಬಾಬ್ತು ಯಾವುದೇ ದಾಖಲಾತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಪ್ರಸ್ತುತ ಪ್ರಕರಣದ ಪೂರ್ವದಲ್ಲಿ ದಾಖಲು ಮಾಡಿದ್ದ ಪ್ರಕರಣವನ್ನು ಆರೋಪಿಯ ಸಹಿಯೂ ವ್ಯತ್ಯಾಸಗೊಂಡ ಕಾರಣ ಹಿಂಪಡೆದಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಹಣವನ್ನು ಹಿಂಪಡೆಯುವ ಉದ್ದೇಶದಿಂದ ಇತರೆ ಚೆಕ್ ನ್ನು ಆರೋಪಿಯಿಂದ ಪುನಃ ಪಡೆದು ಅದಕ್ಕೆ ಸಹಿಯನ್ನು ಮಾಡಿ ಮತ್ತು ಸದರಿ ಹಣವನ್ನು ಸಕ್ರಮಗೊಳಿಸುವ ಉದ್ದೇಶದಿಂದ ನ್ಯಾಯಾಲಯದ ಮುಖಾಂತರ ಪಡೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಪ್ರಸ್ತುತ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲಾತಿಗಳನ್ನು ಆರೋಪಿಯಿಂದ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.